

# ನಿಸರ್ಗದಲ್ಲಿದೆ ನಿಮ್ಮ ಸೌಂದರ್ಯ!

ತೆಂಗಿನ ಎಣ್ಣೆಯಂತಹ ಸೂಪರ್‌ಫುಡ್ ಅನ್ನು ಕೇವಲ ದೇಹದ ಆರೋಗ್ಯಕ್ಕೆ ಮಾತ್ರವಲ್ಲ, ಸೌಂದರ್ಯಕ್ಕೂ ಪೂರಕವಾಗಿ ಬಳಸಬಹುದು. ಮಸಾಲೆ ಪದಾರ್ಥಗಳಾದ ದಾಲ್ಚಿನ್ನಿ, ಜಾಯಿಕಾಯಿಯನ್ನು ಕೂಡಾ ಅಪಾಯಕಾರಿ ರಾಸಾಯನಿಕಗಳಿಂದ ಕೂಡಿದ ಸೌಂದರ್ಯವರ್ಧಕಗಳಿಗೆ ಪರ್ಯಾಯವಾಗಿ ಬಳಸಬಹುದು.

■ ಎಸ್. ಹೆಗಡೆ

ಆರೋಗ್ಯ ಮತ್ತು ಫಿಟ್‌ನೆಸ್ ಕುರಿತ ಕಾಳಜಿ ಸೌಂದರ್ಯಕ್ಕೂ ವಿಸ್ತರಿಸಿ ಬಹಳ ವರ್ಷಗಳಾದವು. ಆರೋಗ್ಯ ಕಾಪಾಡಿಕೊಳ್ಳಲು ರಾಸಾಯನಿಕ ಮುಕ್ತ, ಹರ್ಬಲ್ ಔಷಧಿಗಳತ್ತ ಗಮನ ಕೇಂದ್ರೀಕರಿಸಿದಂತೆ ಸೌಂದರ್ಯ ವರ್ಧಕಗಳೂ ಹರ್ಬಲ್, ವನಸ್ಪತಿ ಮೂಲದ್ದಾಗಿರಲಿ ಎಂದು ಹುಡುಕಾಡುತ್ತದೆ ಮನಸ್ಸು. ಬೇಡಿಕೆಗೆ ತಕ್ಕಂತೆ ಮಾರುಕಟ್ಟೆಯೂ ಹಣ್ಣು, ಹೂವು, ಎಲೆ, ಮಣ್ಣು, ಬೀಜ, ಸಸ್ಯಜನ್ಯ ತೈಲ ಮೊದಲಾದವುಗಳಿಂದ ತಯಾರಾದ ಉತ್ಪನ್ನಗಳ ಭರಪೂರು ಪೂರೈಕೆ ಮಾಡುತ್ತಿದೆ. ಸೂಪರ್ ಮಾರುಕಟ್ಟೆಯ ಸೌಂದರ್ಯವರ್ಧಕಗಳ ಶೆಲ್ಫ್‌ಗಳ ಕಡೆ ಕಣ್ಣು ಹಾಯಿಸಿದರೆ ಸಾಕು, ಹರ್ಬಲ್, ರಾಸಾಯನಿಕ ಮುಕ್ತ, ಜೈವಿಕ.. ಎಂದೆಲ್ಲ ಟ್ಯಾಗ್ ತಗುಲಿಸಿಕೊಂಡ ಉತ್ಪನ್ನಗಳು ಸೂಜಿಗಲ್ಲಿನಂತೆ ಆಕರ್ಷಿಸುತ್ತವೆ.

ಆದರೂ ಈ ಸಿದ್ಧ ಉತ್ಪನ್ನಗಳಲ್ಲಿ ಕಚ್ಚಾವಸ್ತುಗಳು ಏನೇನಿವೆ ಎಂದು ಗೊಂದಲಕ್ಕೆ ಒಳಗಾಗುವುದು ಸಾಮಾನ್ಯ. ಹರ್ಬಲ್ ಶಾಂಪೂವಿನಲ್ಲಿ ತಲೆ ಬುರುಡೆಯಲ್ಲಿ ಹೊಟ್ಟು ಏಳಿಸುವ ರಾಸಾಯನಿಕ ನುಸುಳಿದರೆ.. ಫೇಸ್‌ಕ್ರೀಮಿನಲ್ಲಿ ಮುಖ ಕಾಂತಿಗೆ ಮಂಕು ಹಿಡಿಸುವ ಅಪಾಯಕಾರಿ ವಸ್ತು ಅಡಗಿಕೊಂಡರೆ.. ಎಂದೆಲ್ಲಾ ಸಂಶಯಗಳು ಮೂಡದೇ ಇರದು.

'ಹರ್ಬಲ್ ಎಂದ ಕೂಡಲೇ ಹೆಚ್ಚಿನ ಉತ್ಪನ್ನಗಳ ದುಬಾರಿ ಬೆಲೆ. ಇವೆಲ್ಲವುಗಳಿಂದ ಪಾರಾಗಲು ಕೆಲವು ಉತ್ಪನ್ನಗಳನ್ನು, ಅದೂ ನಿಮ್ಮ ಮೈ–ಮುಖ– ಕೂದಲಿಗೆ ಹೊಂದವಂತಹ ಉತ್ಪನ್ನಗಳನ್ನು ಮನೆಯಲ್ಲೇ ತಯಾರಿಸಿಕೊಂಡು ನಿಮ್ಮದೇ ಆದ ಸೌಂದರ್ಯವರ್ಧಕಗಳ ಶೆಲ್ಫ್ ಮಾಡಿಕೊಂಡು ಬೀಗಬಹುದು' ಎನ್ನುತ್ತಾರೆ ಶಹನಾಜ್ ಹುಸೇನ್ ಬ್ಯೂಟಿ ಅಕಾಡೆಮಿಯಲ್ಲಿ ತರಬೇತಿ ಪಡೆದು ಇಂತಹ ಪ್ರಯೋಗಗಳಲ್ಲಿ ಯಶಸ್ವಿಯಾಗಿರುವ ಸೌಂದರ್ಯತಜ್ಞೆ ಗೀತಾ ಎನ್.ಹೆಗಡೆಕಟ್ಟೆ.

